ಪಿಡಬ್ಲ್ಯೂ ಃ 1

**OS 43/2020**

ಪ್ರಮಾಣ ವಚನ ಭೋದಿಸಿದ ದಿನಾಂಕಃ**09.01.2026**

ಮುಂದುವರಿದ ಪಾಟೀ ಸವಾಲುಃ **ಶ್ರೀಯುತ** ಕೆ ಎನ್ ಎಸ್ **ವಕೀಲರಿಂದಃ** ಪ್ರತಿವಾದಿ **1 , 3** ಮತ್ತು **4** ರವರ ಪರ ಃ

ದಾವಾ ಸ್ವತ್ತಿನಲ್ಲಿ ಭಾಗ ಕೊಡಬೇಕು ಎಂದು ನೋಟೀಸ್ ಕೊಟ್ಟಿದ್ದೇನೆ. ನಾನು ಕೊಟ್ಟ ನೋಟೀಸನ್ನು ನವೀನ್ ಕುಮಾರ್ ರವರು ಪಡೆದಿಲ್ಲ. ನೋಟೀಸ್ ಯಾವಾಗ ಕೊಟ್ಟೆ ಎನ್ನುವ ಬಗ್ಗೆ ನನ್ನ ವಾದಪತ್ರದಲ್ಲಿ ತಿಳಿಸಿಲ್ಲ. ಸೇಲ್ ಸರ್ಟಿಫಿಕೇಟ್ ಪಡೆದ ದಿನಾಂಕ ನೆನಪಿಲ್ಲ. ಸೇಲ್ ಸರ್ಟಿಫಿಕೇಟ್ ಪಡೆದ ನಂತರ ನೋಟೀಸ್ ಜಾರಿಗೊಳಿಸಿದ್ದೇನೆ. ನೋಟೀಸನ್ನು ವಕೀಲರ ಮೂಲಕ ಕೊಟ್ಟಿದ್ದೇನೆ.

2. ಏಲಂನಲ್ಲಿ ದಾವಾ ಸ್ವತ್ತು ಖರೀದಿಸುವ ಮೊದಲು ದಾವಾ ಸ್ವತ್ತಿಗೆ ಸಂಬಂಧಿಸಿದ ಖರೀದಿದಾರರ ಬಗ್ಗೆ ನಮೂದು ಮಾಡಿಲ್ಲ. ದಾವಾ ಸ್ವತ್ತಿನಲ್ಲಿ ಏನು ಇದೆ ಎನ್ನುವ ಬಗ್ಗೆ ತಿಳಿದುಕೊಂಡಿದ್ದೇನೆ. ಅಲ್ಲಿ ಇರುವುದನ್ನು ಮಾಡಿದವರು ಯಾರು ಎಂದು ನಾನು ತಿಳಿದುಕೊಂಡಿಲ್ಲ. ಕೃತಾವಳಿಗಳನ್ನು ಪ್ರತಿವಾದಿಗಳು ಮಾಡಿದ್ದಾರಾ

OS 43/20

ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ವಿಸ್ತೀರ್ಣ 77 ಸೆಂಟ್. ಅದನ್ನು ವಾದಪತ್ರದಲ್ಲಿ ನಮೂದಿಸಿದ್ದೇನೆ. ನಾನು ಮೌಲ್ಯವನ್ನು ನಿಗಧಿ ಮಾಡಿ ಖರೀದಿಸಿದ ಜಾಗದ ವಿಸ್ತೀರ್ಣ 77 ಸೆಂಟ್. ನ್ಯಾಯಾಲಯದಲ್ಲಿ ಏಲಂ ಆದ ನಂತರ ಖರೀದಿಸಿದ 77 ಸೆಂಟ್ ಜಾಗದ ಗಡಿಗುರುತು ಮಾಡಿಸಿಕೊಟ್ಟಿರುತ್ತಾರೆ. ಏಲಂ ನಲ್ಲಿ ಪಡೆದ 77 ಸೆಂಟ್ ಜಾಗದ ಸ್ವಾಧೀನ ಬಿಡಿಸಿಕೊಡಬೇಕೆಂದು ಮಿಸ್ ಕೇಸ್ ದಾಖಲಿಸಿದ್ದೇನೆ. ಸದರಿ ಕೇಸು ಪ್ರಸ್ತುತ ಚಾಲ್ತಿಯಲ್ಲಿದೆ. ಮಿಸ್ ಕೇಸ್ ದಾಖಲಿಸಿರುವ ಕಾರಣ ನನಗೆ ಈ ದಾವೆ ಸಲ್ಲಿಸಲು ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ.

3. ನಾನು ಹಾಜರುಪಡಿಸಿರುವ ಸೇಲ್ ಸರ್ಟಿಫಿಕೇಟ್ ಜಾರಿಗೆ ಬಂದಿಲ್ಲ ಎಂದರೆ ಸಾಕ್ಷಿಯು ಅದನ್ನು ನ್ಯಾಯಾಲಯದಿಂದ ಪಡೆದಿದ್ದೇನೆ ಎಂದು ನುಡಿಯುತ್ತಾರೆ.

ಪ್ರತಿವಾದಿಗಳಿಗೆ ಸೇರಿದ ಜಾಗವನ್ನು ಕಬಳಿಸುವ ಉದ್ದೇಶದಿಂದ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ**

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು